14

# ಜನನ ಮತ್ತು ಬಾಲ್ಯ

## (ಮತ್ತಾಯ 1; 2; ಲೂಕ 1; 2)

**1. ದರ್ಶನಗಳ ಸರಣಿ.**-ಸುವಾರ್ತೆಯ ಚರಿತ್ರೆಯು ನಾಲ್ಕು ದರ್ಶನಗಳ ಸರಣಿಯೊಂದಿಗೆ ಪ್ರಾರಂಭವಾಗುತ್ತದೆ.

*a. ಜಕರೀಯನ ದರ್ಶನ.*-ಜಕರೀಯನು ತಪ್ಪಿಲ್ಲದ ಜೀವಿತದ ಒಬ್ಬ ವಯಸ್ಸಾದ ಯಾಜಕನಾಗಿದ್ದನು. ದೇವಾಲಯದಲ್ಲಿ ತನ್ನ ಕರ್ತವ್ಯಗಳಲ್ಲಿ ನಿರತನಾಗಿದ್ದಾಗ, ಮೆಸ್ಸೀಯನ ಆಗಮನವನ್ನು ದಾನಿಯೇಲನಿಗೆ ಪ್ರಕಟಿಸಿದ (ದಾನಿಯೇಲ 9:21-23) ಗಬ್ರಿಯೇಲ ದೂತನು, ಅವನಿಗೆ ಕಾಣಿಸಿಕೊಂಡನು, ಮತ್ತು ಅವನ ಹೆಂಡತಿ, ಎಲಿಸಬೇತಳಿಗೆ ಒಂದು ಗಂಡುಮಗು ಜನಿಸುವಲ್ಲಿ ಅವರ ಪ್ರಾರ್ಥನೆಗಳು ಉತ್ತರಿಸಲ್ಪಡುವವು ಎಂದು ತಿಳಿಸಿದನು. ವಾಗ್ದಾನಕ್ಕೆ ಒಂದು ಸಂಕೇತದಂತೆ ಮತ್ತು ಮುದ್ರೆಯಂತೆ, ಅವನು ಅದರ ನೆರವೇರುವಿಕೆಯಾಗುವವರೆಗೆ ಮೂಕನಾಗಿರಬೇಕಾಗಿತ್ತು.

*b. ಮರಿಯಳ ದರ್ಶನ.*-ಎಲಿಸಬೇತಳಿಗೆ ಒಬ್ಬ ಬಂಧುವು ಮರಿಯಳು ಇದ್ದಳು, ಆಕೆ ದಾವೀದನ ವಂಶದವಳು. ಆಕೆ ಅವಿವಾಹಿತಳಾಗಿದ್ದು, ಯೋಸೇಫ ಎಂಬ ಹೆಸರಿನ ಮನುಷ್ಯನೊಂದಿಗೆ ವಿವಾಹ ನಿಶ್ಚಯ ಹೊಂದಿದ್ದಳು. ಆಕೆಯ ಬಳಿಗೆ ಅದೇ ದೇವದೂತನು ಸಂತೋಷದ ಸಂದೇಶದೊಂದಿಗೆ ಕಳುಹಿಸಲ್ಪಟ್ಟನು. ಆಕೆಯೂ ಸಹ ಒಂದು ಗಂಡು ಮಗುವಿಗೆ ಜನ್ಮ ಕೊಡುವಳು; ಪರಿಶುದ್ಧಾತ್ಮನ ಸಂತಾನವಾಗಿ, ಆತನು ದೇವರ ಕುಮಾರನು ಎಂದು ಕರೆಯಲ್ಪಡುವನು, ಮತ್ತು ಜನರ ರಕ್ಷಕನಾಗಿರುವನು. ಆನಂದದಿಂದ ತುಂಬಿದವಳಾಗಿ, ಆಕೆ ಗಲಿಲಾಯದಲ್ಲಿಯ ನಜರೇತಿನಲ್ಲಿಯ ತನ್ನ ಮನೆಯಿಂದ, ಯೆಹೂದದಲ್ಲಿಯ ಮಲೆನಾಡಿನಲ್ಲಿದ್ದ ತನ್ನ ಬಂಧುವನ್ನು ಸಂದರ್ಶಿಸಲು ಹೋದಳು.

*c. ಯೋಸೇಫನ ದರ್ಶನ.*-ಮರಿಯಳು ನಜರೇತಿಗೆ ಹಿಂದಿರುಗಿದಾಗ ಆಕೆಯ ಸಂತೋಷದ ಮೇಲೆ ದುಃಖದ ಛಾಯೆಮೂಡಿತು. ಯೆಹೂದ್ಯದಲ್ಲಿ, ವಿವಾಹ ನಿಶ್ಚಯವು ಮದುವೆಯಷ್ಟೇ ಪವಿತ್ರವಾದದ್ದಾಗಿತ್ತು; ಬಂಧನದ ಸ್ಪಷ್ಟವಾದ ಮೀರುವಿಕೆಯು ಆಕೆಯನ್ನು ಅಪಮಾನಕರವಾದ ಮರಣಕ್ಕೆ ತೆರೆದಿಟ್ಟಿತು. ಆದರೆ ಮೂರನೆ ದರ್ಶನವು ಘಟನೆಗಳ ಮಹತ್ವದ ಸಂಗತಿಯ ಬಗ್ಗೆ ಯೋಸೇಫನಿಗೆ ತಿಳಿಯಪಡಿಸಿತು, ಮತ್ತು ವಾಗ್ದಾತ್ತ ಕುಮಾರನಿಗೆ ಇಮ್ಮಾನುವೇಲ್ - ದೇವರು ನಮ್ಮೊಂದಿಗೆ ಇದ್ದಾನೆ - ಎಂಬ ಪ್ರವಾದಿಕ ಹೆಸರು ಕೂಡಿಸಲ್ಪಟ್ಟಿತು (ಹೋಲಿಸು ಮತ್ತಾಯ 1:23; ಯೆಶಾಯ 7:14).

**2. ಬೇತ್ಲೆಹೇಮಿನಲ್ಲಿ ಗೋದಲಿ ತೊಟ್ಟಿಲು.**-ಈ ಸಮಯದ ಮಧ್ಯದಲ್ಲಿ ಎರಡು ವಾಗ್ದಾನಗಳು ನೆರವೇರಿದವು. ದೈವಿಕ ನಿರ್ದೇಶನದಂತೆ ಜಕರೀಯ ಮತ್ತು ಎಲಿಸಬೇತಳ ಮಗನಿಗೆ ಯೋಹಾನ ಎಂದು ಹೆಸರು ಇಡಲ್ಪಟ್ಟಿತು. ಕೆಲವೇ ತಿಂಗಳುಗಳ ನಂತರ ಮರಿಯಳು ತನ್ನ ಚೊಚ್ಚಲು ಮಗನನ್ನು ಹೆತ್ತಳು, ಮತ್ತು ದರ್ಶನಕ್ಕೆ ಅನುಗುಣವಾಗಿ ಆತನನ್ನು *ಯೇಸು* - ರಕ್ಷಕ ಎಂದು ಕರೆಯಲ್ಪಟ್ಟನು. ಇಲ್ಲಿ, ಇತರ ಅನೇಕ ಮಾರ್ಗಗಳಲ್ಲಿ ಇರುವಂತೆ, ಮಾನವ ಯೋಜನೆಗಳು ಅರುಹು ಇಲ್ಲದೆ ದೈವಿಕ ಯೋಜನೆಯೊಂದಿಗೆ,

ಸುತ್ತಿಕೊಂಡಿರುತ್ತವೆ. ಮೆಸ್ಸೀಯನು ಬೇತ್ಲೆಹೇಮಿನಲ್ಲಿ ಜನಿಸಬೇಕಾಗಿತ್ತು (ಮೀಕ 5:2). ಮರಿಯಳ ಮನೆಯು ದೂರದ ನಜರೇತಿನಲ್ಲಿ ಇತ್ತು. ಔಗುಸ್ತ ಚಕ್ರವರ್ತಿಯ ಖಾನೆಷುಮಾರಿಯು ಯೋಸೇಫ ಮತ್ತು ಮರಿಯಳನ್ನು ಅವರ ಸ್ವಂತ ಊರಾದ ಬೇತ್ಲೆಹೇಮಿಗೆ ನಡಿಸಿತು. ಮಾರ್ಟಿನ್ ಲೂಥರನ ತಾಯಿಯೊಂದಿಗಿದ್ದಂತೆ, ಶ್ರಮೆಯ ರಹಸ್ಯಗಳು ಮರಿಯಳನ್ನು ಮನೆಯಿಂದ ಹೊರಗೆ ತೆಗೆದುಕೊಂಡು ಹೋದವು, ಛತ್ರವು ತುಂಬಿಹೋಗಿತ್ತು, ಮತ್ತು ಈ ದೀನ ದಂಪತಿಗಳು ದನದ ಕೊಟ್ಟಿಗೆಯಲ್ಲಿ ಆಶ್ರಯ ಪಡೆದುಕೊಂಡರು. ಅಲ್ಲಿ, ಔಗುಸ್ತನು ವಿಶಾಲವಾದ ಸಾಮ್ರಾಜ್ಯದ ಬಗ್ಗೆ ಯೋಜಿಸುವದರಲ್ಲಿ ನಿರತನಾಗಿದ್ದಾಗ, ಮತ್ತು ಹೆರೋದನು ಹೊಸ ದುಷ್ಟ ಕಾರ್ಯಗಳ ಸಂಚು ಮಾಡುತ್ತಿದ್ದಾಗ ಮತ್ತು ದೊಡ್ಡ ಜಗತ್ತಿನಲ್ಲಿ ಪ್ರತಿಯೊಬ್ಬನು ತನ್ನ ತನ್ನ ಮಾರ್ಗದಲ್ಲಿ ಹೋಗುತ್ತಿದ್ದಾಗ, ಬಹಳ ಮಹತ್ವದ ಘಟನೆಯ ಅರುಹು ಇಲ್ಲದೇ ಇದ್ದಾಗ, *ದೈವಿಕ ಮಾನವನು* ಜನಿಸಿದನು.

**3. ಕುರುಬರ ದರ್ಶನ.**-ಭೂಲೋಕವು ತನ್ನ ಅರಸನ ಆಗಮನದ ಬಗ್ಗೆ ಅರುಹು ಇಲ್ಲದ್ದಾಗಿತ್ತು; ಆದರೆ ಪರಲೋಕವು ಮೌನವಾಗಿರಲಿಲ್ಲ; ದೇವದೂತರು ಶುಭವಾರ್ತೆಯನ್ನು ತಂದರು, "ಭೂಲೋಕಕ್ಕೆ ಸಮಾಧಾನ"[1] ಎಂಬ ತಮ್ಮ ಸಂಗೀತ ಹಾಡಿದರು; ಅರಸರುಗಳಿಗೆ, ಅರಮನೆಗಳಿಗೆ ಅಲ್ಲ, ಗರ್ವಿಗಳಾದ ಯಾಜಕರಿಗೆ ಅಲ್ಲ, ಅಥವಾ ಜಂಬದ ಫರಿಸಾಯರಿಗೆ ಅಲ್ಲ, ಆದರೆ ಆತನ ದೀನತೆಯ ತೊಟ್ಟಿಲದ ಬಳಿಗೆ ತಮ್ಮ ಮಾರ್ಗ ಮಾಡಿಕೊಂಡ ಬಡ ಕುರುಬರಿಗೆ. ಜಗತ್ತಿನ ವಿಮೋಚಕನಿಗೆ ಅವರು ಭೂಲೋಕದ ಮೊದಲನೆಯ ಸತ್ಕಾರಾ ಮಾಡಿದರು. "ಆತನ ಮಾತನ್ನು ಸಂತೋಷದಿಂದ ಕೇಳಿದ"[2] ಸಾಮಾನ್ಯ ಜನರ ಮುಂದೂತರೂ ಪ್ರತಿನಿಧಿಗಳೂ ಅವರಾಗಿದ್ದರು. ಮತ್ತು ಆತನ ಶಿಷ್ಯರಲ್ಲಿ ಹೆಚ್ಚಿನವರಾಗಿದ್ದರು.

**4. ದೇವಾಲಯದಲ್ಲಿಯ ಗುಂಪು.**-ಎಂಟನೆಯ ದಿನದಲ್ಲಿ ಯೆಹೂದಿ ಪದ್ಧತಿಯ ಪ್ರಕಾರ ಸುನ್ನತಿಯೂ ಹೆಸರಿಡುವಂಥದ್ದೂ ಸಂಭವಿಸಿತು. ನಾಲ್ವತ್ತು ದಿನಗಳ ಅಂತ್ಯದಲ್ಲಿ, ಮರಿಯಳು ಯೆರೂಸಲೇಮಿನಲ್ಲಿ ಕಾಣಿಸಿಕೊಂಡಳು, ಅದು ಆರು ಮೈಲು ದೂರದಲ್ಲಿತ್ತು. ಅಂಥ ವಿಷಯಗಳಲ್ಲಿ ಅಗತ್ಯವಾಗಿದ್ದ ಅರ್ಪಣೆಗಳನ್ನು ಮಾಡಲಿಕ್ಕೆ ಬಂದಿದ್ದಳು (ಯಾಜಕಕಾಂಡ 12). "ದೇವಾಲಯದ ಕರ್ತನು ಕರ್ತನ ದೇವಾಲಯದಲ್ಲಿ ಕಾಣಿಸಿಕೊಂಡನು." ಅವರ ಸ್ಪಷ್ಟವಾದ ಬಡತನವು (ಹೋಲಿಸು ಲೂಕ 2:24; ಯಾಜಕಕಾಂಡ 12:8) ದೇವಾಲಯದಲ್ಲಿ ಶಾಸ್ತ್ರಿಗಳಿಂದಲೂ ಯಾಜಕರಿಂದಲೂ ಗಮನಿಸಲ್ಪಡುತ್ತಿತ್ತು. ಆದರೆ, ಅಲ್ಲಿಯೂ ಸಹ, ಬೇತ್ಲೆಹೇಮಿನ ದಿನಗಳಲ್ಲಿದ್ದಂತೆ, ದೈವಿಕ ಅಂತರ್ಭಾವನೆಗಳಿಗೆ ತೆರೆದ ಭಕ್ತಿಯುಳ್ಳ ಆತ್ಮಗಳೂ ಮತ್ತು ಬಹಳ ಸಮಯದಿಂದ ನಿರೀಕ್ಷಿಸಲ್ಪಡುತ್ತಿದ್ದ ಮೆಸ್ಸೀಯನ ಆನಂದಕರವಾದ ಗುರುತಿನಿಂದ ಆಶ್ಚರ್ಯಚಕಿತರಾದವರೂ ಇದ್ದರು. ಅಂಥ ಇಬ್ಬರು ಹೆಸರುಗಳು ವಯಸ್ಸಾದ ಸಿಮೆಯೋನ ಮತ್ತು ಅನ್ನಳು ಎಂದಿವೆ. ಹಿಬ್ರೂ ಜನಾಂಗವನ್ನು ಪ್ರಸಿದ್ಧಿಗೆ ತಂದ ಪ್ರವಾದಿಕ ಆತ್ಮದ ಪ್ರತಿನಿಧಿ ಅವರಾಗಿದ್ದಾರೆ, ಮತ್ತು ಯೇಸುವನ್ನು ಮೆಸ್ಸೀಯನಂತೆ ಬಹಿರಂಗವಾಗಿ ಪ್ರಕಟಿಸಿದವರಲ್ಲಿ ಮೊದಲಿಗ ರಾಗಿದ್ದಾರೆ.

**5. ಪಂಡಿತರ ಸಂದರ್ಶನ.**-ಆದರೆ ಬೇತ್ಲೆಹೇಮಿನ ಶಿಶುವಿನ ಗೋದಲಿಯ ಸುತ್ತ ಕೂಡಿ ಬಂದವರಲ್ಲಿ ಕುರುಬರು ಮತ್ತು ಇಸ್ರಾಯೇಲಿನ ಪ್ರವಾದಿಕ ಭಾವನೆಯುಳ್ಳವರು ಮಾತ್ರವೇ ಅಲ್ಲ ಪ್ರಕಟನೆಯಿಂದ ಬಹುದೂರದಲ್ಲಿದ್ದ ಆಶ್ಚರ್ಯಚಕಿತರಾದವರೂ ಇದ್ದರು. ಕ್ರಿಸ್ತನಿಗೆ ಭಕ್ತಿ ಸಮರ್ಪಣೆ ಮಾಡಿದ ಪಂಡಿತರಲ್ಲಿ ಅನ್ಯಜನಾಂಗದ ಜಗತ್ತು ಪ್ರತಿನಿಧಿಸಲ್ಪಟ್ಟಿತು, "ಮೂಡಣ ದೇಶದ ಜೋಯಿಸರು ಯೆರೂಸಲೇಮಿಗೆ ಬಂದು -

ಯೆಹೂದ್ಯರ ಅರಸನಾಗಿ ಹುಟ್ಟಿದವನು ಎಲ್ಲಿದ್ದಾನೆ? ಆತನನ್ನು ಸೂಚಿಸುವ ನಕ್ಷತ್ರವನ್ನು ಮೂಡಣದೇಶದಲ್ಲಿ ಕಂಡು ಆತನಿಗೆ ಅಡ್ಡಬೀಳುವುದಕ್ಕೆ ಬಂದೆವು ಅಂದರು."[3] ಅವರ ಹೆಸರು ಮತ್ತು ರಾಷ್ಟ್ರೀಯತೆ ನಕ್ಷತ್ರದ ಲಕ್ಷಣ ಮತ್ತು ಅವರ ಜ್ಞಾನದ ಆಳತೆಯ ಬಗ್ಗೆ ಊಹನೆಗಳು ನಿರುಪಯೋಗದವುಗಳಾಗುತ್ತವೆ, ಆದರೆ ವಿಶಾಲವಾದ ಮೂರ್ತಿಕ ಪೂಜಕ ವಲಯದ ನಿಶ್ಚಯವಿಲ್ಲದ ಬಯಕೆಗಳ ಮತ್ತು ನಿರೀಕ್ಷೆಯ ಪ್ರತಿನಿಧಿಗಳಾಗಿ ಮತ್ತು ಎಲ್ಲಾ ಮೂರ್ತಿಪೂಜಕ ವಲಯವು ನಮ್ಮ ಅರಸನಿಗೆ ಪ್ರೀತಿಯ ಆರಾಧನೆಯೊಂದಿಗೆ ಒಂದಾಗುವ ಸಮಯದ ಒಂದು ಪ್ರವಾದನೆಯ ಪ್ರತಿನಿಧಿಗಳಾಗಿ ನಿಂತುಕೊಳ್ಳುತ್ತಾರೆ.

**6. ಹೆರೋದನ ಆಜ್ಞೆ ಮತ್ತು ಐಗುಪ್ತಕ್ಕೆ ಓಡಿಹೋದದ್ದು.**-ಹೆರೋದನು ಅತೀ ವೇದನೆಯ ರೋಗ ದಿಂದ ತ್ವರಿತವಾಗಿ ಮುಳುಗಿ ಹೋಗುತ್ತಿದ್ದನು. ಅವಿಶ್ರಾಂತಿಗಾಗಿ ಅವನಿಗೆ ಪ್ರತಿಯೊಂದು ಕಾರಣವಿತ್ತು, ಯಾಕಂದರೆ ಅವನ ಸಿಂಹಾಸನವು ಅವನ ಮತ್ಸರದ ದ್ವೇಷದ ಮೇಲೆ ಅವಲಂಬಿಸಿತು. ಮುಸುಕಿನಲ್ಲಿದ್ದ ದಂಗೆಯು ಅವನ ರಾಜ್ಯದಲ್ಲೆಲ್ಲಾ ಹಬ್ಬಿಕೊಂಡಿತ್ತು. ಅಂಥ ಸಮಯದಲ್ಲಿ, ಅಂಥ ಮನುಷ್ಯನಿಗೆ, ಪಂಡಿತರ ಪ್ರಶ್ನಿಸುವಿಕೆಯು ಈಟಿಯಿಂದ ಇರಿದ ಹಾಗೆ ಇತ್ತು. ಆದರೆ ಭಯಾನಕತೆಯನ್ನು ಕೊಲೆ ಮಾಡುವ ಉದ್ದೇಶವನ್ನೂ ಮುಸುಗಿನಲ್ಲಿಟ್ಟುಕೊಂಡು, ಅವರು ಮಗುವನ್ನು ಕಂಡುಕೊಂಡಾಗ ಬಂದು ತನಗೆ ತಿಳಿಸಬೇಕೆಂದು ಅವನು ಪಂಡಿತರಿಗೆ ಆಜ್ಞೆ ಮಾಡಿದನು. ದೈವಿಕ ಮಾರ್ಗದರ್ಶನಕ್ಕೆ ವಿಧೇಯರಾಗಿ ಪಂಡಿತರು ಬೇರೆ ದಾರಿಯಿಂದ ತಮ್ಮ ಮನೆಗೆ ಹೋದರು. ಬೇತ್ಲೆಹೇಮಿನ ಮತ್ತು ಸುತ್ತಲಿನ ನಿರಪರಾಧಿಗಳ ಮೇಲೆ ಕ್ರೂರವಾಗಿ ವರ್ತಿಸಿದನು. ಆತನು (ಯೇಸುವು) ಪಾಪಕ್ಕಾಗಿ ತನ್ನ ಸ್ವೇಚ್ಛೆಯ ಯಜ್ಞದಲ್ಲಿ ಸಮರ್ಪಿಸಲು ಸಿದ್ಧನಾಗುವವರೆಗೆ ಆ ಜೀವಕ್ಕೆ ವಿರುದ್ಧವಾಗಿ ಯಾವುದೂ ನಿಲ್ಲಬಾರದು, "ಆತನು ತನ್ನ ಖಡ್ಗವನ್ನು ಗೂಡಿನಲ್ಲಿ ತೂರಿದನು ಆದರೆ ಪಕ್ಷಿಯು ಹಾರಿಹೋಗಿತ್ತು." ದೈವಿಕ ನಡಿಸುವಿಕೆಗ ಳನ್ನು ಯಾವಾಗಲೂ ಗಮನಿಸುತ್ತಿದ್ದ ಯೋಸೇಫನು, ಹೆರೋದನ ಆಳ್ವಿಕೆಯ ಗಡಿಗ ಳನ್ನು ದಾಟಿ ಐಗುಪ್ತಕ್ಕೆ ತಪ್ಪಿಸಿಕೊಂಡು ಹೋಗಿದ್ದನು; ಆದರೆ ಅತಿದೊಡ್ಡ ಯೆಹೂದಿ ಸಮೂಹದೊಳಗೆ ಹೋಗಿದ್ದನು! ಅನಂತರ ಹೆರೋದನು ಬೇಗನೇ ಸತ್ತು ಹೋದನು. ಆದರೆ ಅರ್ಖೆಲಾಯನಿಗೆ ಬಯಪಟ್ಟನು. ಅವನು ಯೂದಾಯದಲ್ಲಿ ತನ್ನ ತಂದೆಯ ಸಿಂಹಾಸನವನ್ನೂ ಅವನ ರಾಜನೀತಿಯನ್ನು ವಹಿಸಿಕೊಂಡಿದ್ದನು. ಯೋಸೇಫನು ನಜರೇತಿನಲ್ಲಿ ತನ್ನ ಮನೆಗೆ ಹಿಂದಿರುಗಿ ಬಂದನು.

---

ಟಿಪ್ಪಣಿಗಳು

[1]ಲೂಕ 2:14. [2]ಮಾರ್ಕ 12:37. [3]ಮತ್ತಾಯ 2:1, 2.

© 2009 Truth for Today